# ವಿಶ್ವಪ್ರಜೆ ವಿಶ್ವಪ್ರಜ್ಞೆ

ಎಲ್ಲವೂ ತುಂಬಿಕೊಂಡಿದೆ ಇಲ್ಲಿ ಎಲ್ಲೆಲ್ಲೂ! ಎಲ್ಲವೂ ಎನ್ನುವ ಪದ ತುಂಬಿಕೊಂಡಿರುವಿಕೆಯನ್ನೇ ಸೂಚಿಸಬೇಕಷ್ಟೇ. ತುಂಬಿಕೊಂಡಿರುವುದು ಎಂದರೆ ಇಡಿಯಾಗಿರುವುದು. ಸಂಸ್ಕೃತದಲ್ಲಿ ಪೂರ್ಣ ಎನ್ನುತ್ತಾರೆ. ಪೂರ್ಣ ಎಂದರೆ ಪೂರಯಿಸಿಕೊಂಡಿರುವುದು, ತುಂಬಿಕೊಂಡಿರುವುದು, ಯಾವ ಕೊರತೆಯೂ ಇಲ್ಲದಿರುವುದು, ಕೊರತೆ ಇದ್ದು ಇನ್ನೊಂದರಿಂದ ತನ್ನ ಈ ಕೊರತೆಯನ್ನು ತುಂಬಿಸಿಕೊಂಡಿರುವುದಲ್ಲ, ಕೊರತೆಯೇ ಇಲ್ಲದಿರುವುದು! ಕಡಲು ನೀರಿನಿಂದ ತುಂಬಿಕೊಂಡಿರುವಂತೆ. ಬಾನು, ಖಾಲಿ ಜಾಗದಿಂದ ತುಂಬಿಕೊಂಡಿರುವಂತೆ.

ಪ್ರತಿಯೊಂದು ಜೀವಿಯೂ ತನ್ನ ತಾನೇ ಪೂರ್ಣವಾಗಿದೆ. ಇಡಿಯಾಗಿಯೇ ಇದೆ. ಅದು, ಇನ್ನೊಂದಾಗಿ ಪೂರ್ಣವಾಗಬೇಕಾಗಿಲ್ಲ. ಕೃತಾರ್ಥವಾಗಬೇಕಿಲ್ಲ. ಇನ್ನೊಂದಾಗುವುದು ಕೃತಾರ್ಥತೆಯೇ ಅಲ್ಲ. ತಾನು ತಾನಾಗುವುದೇ ಕೃತಾರ್ಥತೆ. ಅಂದರೆ ತನ್ನ ಪೂರ್ಣತೆಯನ್ನು ತಾನು ಅರಿತರೆ ಸಾಕು! ಆದುದರಿಂದಲೇ ಪೂರ್ಣತೆಯ ದೃಷ್ಟಿಯಲ್ಲಿ ಲೆಕ್ಕಾಚಾರಗಳಿರುವುದಿಲ್ಲ. ಕೂಡಿಸು, ಕಳೆ, ಗುಣಿಸು- ಭಾಗಿಸು ಇರುವುದಿಲ್ಲ. ಪೂರ್ಣದಿಂದ ಕಳೆಯಬೇಕೆಂದುಕೊಂಡ ವಸ್ತುವೊಂದು ಬೇರೆಯಾಗಿದ್ದರೆ ಆಗ ಇದನ್ನು ಪೂರ್ಣವೆನ್ನಲಾಗುತ್ತದೆಯೆ? ಹಾಗೆಯೇ ಪೂರ್ಣಕ್ಕೆ ಕೂಡಿಸಬಲ್ಲ ಇನ್ನೊಂದು ವಸ್ತು ಇದ್ದರೆ ಬೇರೆಯಾಗಿ ಇದ್ದರೆ, ಇದನ್ನು ಪೂರ್ಣವೆನ್ನಲಾಗುವುದಿಲ್ಲ. ಆದುದರಿಂದ ಈ ಎಲ್ಲ ಬಗೆಯ ಲೆಕ್ಕಾಚಾರದ, ವ್ಯವಹಾರದ, ಲಾಭ-ನಷ್ಟದ, ಕೀಳರಿಮೆ- ಮೇಲರಿಮೆಗಳ ಲೌಕಿಕ ಮನಃ ಸ್ಥಿತಿಗಿಂತ ಬೇರೆಯಾದದ್ದು ಪೂರ್ಣತೆಯ ಪರಿಕಲ್ಪನೆ. ಹಾಗೆಂದು- ಬೇರೆಯಾದದ್ದು ಎಂದೂ ಹೇಳುವಂತಿಲ್ಲ. ಅದಕ್ಕೆ ಬೇರೆಯಾಗಿ ಯಾವುದೂ ಇಲ್ಲವಾಗಿ. ಅದು ಎಲ್ಲವನ್ನೂ ಒಳಗೊಂಡಿದೆಯಾಗಿ. ಆದರೂ ಬಹಳ ಲೆಕ್ಕಾಚಾರದ ಸ್ವ-ಲಾಭ ನಷ್ಟ ಚಿಂತನೆಯಲ್ಲಿಮುಳುಗಿಹೋದ ಮನಸ್ಸಿಗೆ ಪೂರ್ಣತೆಯ ಹೊಳಹು ಉಂಟಾಗದು ಎನ್ನಬಹುದು. ಉಂಟಾಗದಿದ್ದರೆ ಅದು ದೊಡ್ಡ ನಷ್ಟ ಎಂದು ಲಾಭ- ನಷ್ಟಗಳ ಭಾಷೆಯಲ್ಲಿಯೇ ಉಪನಿಷತ್ತು ಹೇಳಿತ್ತು. ಮಹತೀ ವಿನಷ್ಟಿಃ.

ಪೂರ್ಣತೆಯ ಜಿಜ್ಞಾಸೆಯು ತತ್ವಜ್ಞಾನದ ವಿಷಯ ಮಾತ್ರವಲ್ಲ. ಅದು ಅನುದಿನದ ಬದುಕಿನಲ್ಲಿ ಕಂಡು ಬರಬಹುದಾದ ಅನುಭವವಾಗಿದೆ. ಹಾಗೆ ಬದುಕಿನ ಅನುಭವಗಳಲ್ಲಿ ಆಸಕ್ತವಾದ ಸಾಹಿತ್ಯದಲ್ಲಿ ಇಂಥ ಅನುಭವಗಳು ದಾಖಲಾಗಿವೆ. ಕುವೆಂಪು ಅವರ ಮಹಾಕಾದಂಬರಿ ಮಲೆಗಳಲ್ಲಿ ಮದುಮಗಳುವಿನಲ್ಲಿ ಮಲೆನಾಡಿನ ಬೆಳಗಿನ ಬಿಸಿಲಿಗೆ ಮೈಯೊಡ್ಡಿದ ಮುಪ್ಪಿನ ಜೀವವೊಂದರ ಅನುಭವ ಹೇಗೆ ದಾಖಲಾಗಿದೆ ನೋಡಿ:

ಹಸುಳೆ ಬಿಸಿಲಿನ ಬಾಲ್ಯದ ಬೆಚ್ಚನೆಯ ಸೋಂಕಿಗೆಳಸಿ ಸುಬ್ಬಣ್ಣ ಹೆಗ್ಗಡೆಯವರು ಮುಪ್ಪಿನ ಮೇಯ್ಗೆ ಸುತ್ತಿದ್ದ ಕರಿಕಂಬಳಿಯನ್ನು ಬಿಚ್ಚಿ ಹಂದಿಯೊಡ್ಡಿಯ ಮೇಲಿಟ್ಟರು. ಸುಕ್ಕಿನ ಕಿರುದೆರೆ ನಿರಿನಿರಿಯಾಗಿದ್ದ ಅವರ ಎಣ್ಣೆಗಪ್ಪಿನ ಒಡಲಿಗೆ ಬೆಚ್ಚನೆಯ ಬಿಸಿಲು ಮುತ್ತಿಟ್ಟೊಡನೆ ಸುಪ್ತಚಿತ್ತದ ಆಳದಲ್ಲಿ ಗುಪ್ತವಾಗಿದ್ದ ನೂರಾರು ಹೋದ ಕಾಲದ ಮುದ್ದಾಟಗಳ ನೆನಹಿನ ಸೊಗಸು ಜಾಗೃತ ಚಿತ್ತದ ಸರೋವರದಲ್ಲಿ ಪುಲಕಿಸಿತು. ಏಕೋ ಏನೋ ಅವರಿಗೆ ಗೊತ್ತಾಗಲಿಲ್ಲ. ಅಂತೂ ಮೈಗೆ ಬಹಳ ಹಿತವಾಯಿತು. ಮನಸ್ಸಿಗೂ ಸಂತೋಷ ಆಯಿತು. ಮುಂಬೆಳಗೆ ಹೊಂಬೆಳಗಾಗಿ ಮನಸ್ಸು ಪ್ರಸನ್ನವಾಯಿತು.

ಮಳೆ ತೊಯ್ದ ಮಲೆನಾಡಿನ ಮೇಲೆ ಮೂಡಿದೆಳ ಬಿಸಿಲಿಗೆ ಮೈಯ್ಯೊಡ್ಡಿದ ಸುಬ್ಬಣ್ಣ ಹೆಗ್ಗಡೆಯವರಿಗೆ ಸಂಭವಿಸಿದ ಸಂತೋಷಕ್ಕೆ ಬಹುಮಟ್ಟಿಗೆ ಕಾರಣವಾಗಿದ್ದದ್ದು ಅಸ್ಮೃತಿ. ಯಾವ ಯಾವ ಕಾಲದಲ್ಲಿ, ಯಾವ ಯಾವ ದೇಶದಲ್ಲಿ ಯಾವ ಯಾವ ರೂಪದಲ್ಲಿ, ಯಾವ ಯಾವ ಸನ್ನಿವೇಶದಲ್ಲಿ ಯಾವ ಸಾಗರ ತೀರದಲ್ಲಿ ಯಾವ ಪರ್ವತ ಶಿಖರದಲ್ಲಿ, ಯಾವ ಅರಣ್ಯಕುಂಜಸೀಮೆಯಲ್ಲಿ ಅಂಥ ಸೂರ್ಯೋದಯದ ಸೊಂಪನ್ನು ಹಿಂದೆ ಎನಿತುಸಾರಿ ಅನುಭವಿಸಿದ್ದರೋ ಏನೋ. ಆ ಸಂಸ್ಕಾರಕೋಶದ ಖಜಾನೆಗೆ ಬೀಗದಕೈಮಾತ್ರವಾಗಿತ್ತು ಆವೊತ್ತಿನ ಸೂರ್ಯೋದಯ! ಹಳೆಮನೆ ಆದರೇನಂತೆ! ಹಂದಿಯೊಡ್ಡಿಯ ಬಳಿಯಾದರೇನಂತೆ? ಅಕ್ಷರಹೀನ ಅಸಂಸ್ಕೃತ ಒಕ್ಕಲಿಗನಾದರೇನಂತೆ? ಮುಪ್ಪಡಸಿದ್ದರೇನಂತೆ? ಸುಬ್ಬಣ್ಣ ಹೆಗ್ಗಡೆಯೂ ವಿಶ್ವಪ್ರಜೆ!

ಬೆನ್ನಿಗೆ ಬಿದ್ದ ಬಿಸಿಲು ನಾಲಗೆಗೆ ಬೀಳುವ ಜೇನಾಗಿತ್ತು. ಹೆಗ್ಗಡೆಯವರು ಸ್‌ಸ್‌ಸ್ ಆಯ್ ಎನ್ನುತ್ತ ಮುಂಡಾಡುವ ರೀತಿಯಲ್ಲಿ ಬೆನ್ನು ನೀವಿಕೊಂಡರು. ಲೋಕವೆಲ್ಲ ಅಶೋಕವಾಗಿ ಸುಖಮಯವಾಯಿತು. ಮನದಲ್ಲಿ ವಿಶ್ವಮೈತ್ರಿಮೂಡಿತು. ಹಂದಿ, ಕೋಳಿ, ಕುರಿ, ಮರ, ಕಾಡು, ಆಕಾಶ, ಹಾಡುತ್ತಿದ್ದ ಕಾಡು ಹಕ್ಕಿಗಳ ಹಿಂಡು, ನೆರೆಹೊರೆ ಎಲ್ಲದರ ಮೇಲೆಯೂ ಅಕ್ಕರೆಯುಕ್ಕಿತು. ಹೆಗ್ಗಡೆಯವರ ಜೀವಮಾನ ಕಟ್ಟಡದಲ್ಲಿ ಆ ಒಂದು ಕ್ಷಣದ ಬಾಳು ಗೋಪುರದ ತುದಿಯ ಕಳಶದ ಚಿನ್ನದ ಡೆಂಕಣಿಯಾಗಿ ಸ್ವರ್ಗದೊಡನೆ ಸರಸವಾಡಿತು.

ಈ ಅನುಭವವನ್ನು ಕುವೆಂಪು ಗಹನವಾಗಿ ವಿವರಿಸುತ್ತಾರೆ.

ಮನುಷ್ಯಜೀವಿಯ ಆತ್ಮಕೋಶವು ಬಹುಜನ್ಮಗಳ ಸಂಸ್ಕಾರಗಳಿಂದ ತುಂಬಿದೆ ಎನ್ನುತ್ತಾರೆ. ಆತನ ಅನ್ನಮಯಕೋಶವೂ ಪೃಥ್ವಿಯಲ್ಲಿ ಪ್ರಾಣೋತ್ಪತ್ತಿಯಾದಂದಿನಿಂದ ಮೊದಲುಗೊಂಡು ಇಂದಿನವರೆಗೆ ಜೀವವು ಕೈಗೊಂಡ ನಾನಾ ರೂಪದ ನಾನಾ ಪ್ರಯೋಗಗಳ ನಾನಾ ಕಷ್ಟಸಂಕಟಗಳ ನಾನಾ ಸುಖ ಸಂತೋಷಗಳ ಮಹಾಸಾಹಸ ಯಾತ್ರೆಯ ಸಮಗ್ರ ಪರಿಣಾಮ ಮುದ್ರೆಯನ್ನು ಅಸ್ಮೃತಿ ರೂಪದಲ್ಲಿ ಪಡೆದಿರುತ್ತದೆ ಎನ್ನುತ್ತಾರೆ.

ಅಪ್ರಜ್ಞಾಸೀಮೆಯಲ್ಲಿರುವ ಆ ಸಂಸ್ಕಾರಗಳಲ್ಲಿ ಯಾವುದನ್ನಾದರೂ ಮುಟ್ಟಿ ಎಚ್ಚರಿಸುವಂಥ ಸನ್ನಿವೇಶ ಒದಗಿದರೆ ನಮಗೆ ಅಹೇತುಕ ಆನಂದವೋ ಅಕಾರಣ ಸಂಕಟವೋ ಸಂಭವಿಸಿದಂತಾಗುತ್ತದೆ ಎನ್ನುತ್ತಾರೆ.

ಇರಬಹುದು. ಮುಖ್ಯವಾದ ಮಾತೆಂದರೆ, ವಿಶ್ವಪ್ರಜೆಯ ಮನಸ್ಸಿನಲ್ಲಿ ವಿಶ್ವಪ್ರಜ್ಞೆಯು ಅರಳಿಕೊಳ್ಳುವುದಕ್ಕೆ ಲೌಕಿಕದ ಯಾವ ಸ್ಥಿತಿಗತಿಗಳೂ ಲೆಕ್ಕಕ್ಕೇ ಬರುವುದಿಲ್ಲ ಎನ್ನುವುದು. ವಿಶ್ವಪ್ರಜ್ಞೆಯು ಅಥವಾ ಪೂರ್ಣತೆಯ ಭಾವವು **unconditional**- ಎನ್ನುವುದು. ಮನುಷ್ಯಜೀವಿಯು ಹೇಗೆ ಇದ್ದರೂ ಅವನು ವಿಶ್ವ-ಪ್ರಜೆ. ಆದುದರಿಂದ ವಿಶ್ವ-ಪ್ರಜ್ಞೆಯು ಅವನಲ್ಲಿ ಅರಳಿಕೊಳ್ಳುವುದಕ್ಕೆ ಯಾವುದೂ ಅಡ್ಡಿಯಾಗಲಾರದು. ವಿಶ್ವಪ್ರಜೆ ಮತ್ತು ವಿಶ್ವಪ್ರಜ್ಞೆ ಇವೆರಡೂ ಎಲ್ಲ ಕಂಡೀಷನ್‌ಗಳನ್ನೂ ಸಾಮಾಜಿಕ ವಿಧಿ-ನಿಷೇಧಗಳನ್ನೂ ಮೀರಿದ್ದು! ಅಂದರೆ ವಿಶ್ವಪ್ರಜೆಯಾಗಿರುವುದಕ್ಕೆ ಯಾವ ಗುರುತಿನ ಚೀಟಿಯೂ ಬೇಕಿಲ್ಲ! ಯಾರಿಗೂ ಯಾರೂ ನಿರಾಕರಿಸಲಾಗದ, ಯಾರ ಒಪ್ಪಿಗೆಯೂ ಬೇಕಿಲ್ಲದ, ಪ್ರಜೆತನವದು. ವಿಶ್ವ-ಪ್ರಜ್ಞೆಯೂ ಹಾಗೇ. ಇಲ್ಲಿ ನಾವು ಮಾಡಿಕೊಂಡ ಯಾವ ನಿಯಮಗಳನ್ನೂ ಅದು ತನ್ನ ಗಣನೆಗೇ ತೆಗೆದುಕೊಳ್ಳುವುದಿಲ್ಲ ಎನ್ನುವ ಅರಿವು ಎಲ್ಲ ಕ್ರಾಂತಿಯ ಬೀಜದಂತೆ ಅನಿಸುತ್ತದೆ!

■ **ತೋಷ**

## ಮಾತೇ ಮುತ್ತು

★ ಹೊಗಳಿಕೆ ಎನ್ನುವುದು ಅದ್ಭುತ. ಬೇರೆಯವರಲ್ಲಿರುವ ಗುಣಗಳನ್ನು ಆ ಮೂಲಕ ನಮ್ಮದಾಗಿಸಿಕೊಳ್ಳಬಹುದು.

-ವಾಲ್ಟೇರ್

★ ಮೂರನೇ ವಿಶ್ವಯುದ್ಧದಲ್ಲಿ ಯಾವ ಆಯುಧಗಳನ್ನು ಬಳಸುತ್ತಾರೋ ಗೊತ್ತಿಲ್ಲ. ಆದರೆ ನಾಲ್ಕನೇ ವಿಶ್ವಯುದ್ಧದಲ್ಲಿ ಖಂಡಿತ ಕಲ್ಲು, ದೊಣ್ಣೆಗಳನ್ನು ಬಳಸುತ್ತಾರೆ.

-ಆಲ್ಬರ್ಟ್ ಐನ್‌ಸ್ಟೀನ್

★ ಬೆಳಿಗ್ಗೆ ಬೇಗ ಎದ್ದೇಳಿ. ನಿಮ್ಮ ತಲೆಯನ್ನು ಕಾಲಿನ ಮಟ್ಟಕ್ಕೆ ಹೆಚ್ಚು ಕಾಲ ಇಟ್ಟುಕೊಳ್ಳುವುದು ಒಳ್ಳೆಯದಲ್ಲ.

-ಹೆನ್ರಿ ಡೇವಿಡ್ ಥೋರೊ

★ ನಿಜವಾದ ಗೆಳೆಯನ ಮುಂದೆ ನೀವು ಗಟ್ಟಿ ಧ್ವನಿಯಲ್ಲಿ ಯೋಚಿಸಬಹುದು.

-ರಾಲ್ಫ್ ಎಮರ್ಸನ್

★ ನನ್ನ ನಂಬಿಕೆಗಳಿಗಾಗಿ ನಾನು ಸಾಯಬಯಸುವುದಿಲ್ಲ. ಏಕೆಂದರೆ ನಂಬಿಕೆಗಳು ತಪ್ಪಿರಲೂಬಹುದು.

-ಬರ್ಟ್ರೆಂಡ್ ರಸೆಲ್

★ ಹೆಚ್ಚಿನ ಜನ ಯೋಚಿಸಲು ಬಯಸುವುದಿಲ್ಲ. ಯೋಚಿಸಿದರೆ ತೀರ್ಮಾನವೊಂದಕ್ಕೆ ಬರಬೇಕಾಗುತ್ತದೆ. ತೀರ್ಮಾನಗಳು ಎಲ್ಲ ಕಾಲಕ್ಕೂ ಸಂತೋಷದಾಯಕ ಆಗಿರುವುದಿಲ್ಲ.

-ಹೆಲನ್ ಕೆಲ್ಲರ್